REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 | ಸಂಚಿಕೆ : 11 | ಜೂನ್ 21, 2023 | ಬುಧವಾರ | ಪುಟಗಳು : 8 | ಬೆಲೆ : 2/-

# ಸಹಕಾರ ಸಮೃದ್ಧಿ ಸೌಧ ಕಟ್ಟಡ ನಿರ್ಮಾಣಕ್ಕೆ ಮುಖ್ಯಮಂತ್ರಿಗಳಿಂದ ಶಂಕುಸ್ಥಾಪನೆ



ಬೆಂಗಳೂರು: ಹಲವಾರು ವರ್ಷಗಳಿಂದ ಬೇಡಿಕೆ ಇದ್ದ ಸಹಕಾರ ಸಂಘಗಳ ನಿಬಂಧಕರ ಕಚೇರಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದ್ದು, ನಿಗದಿತ ಸಮಯದೊಳಗೆ ಕಟ್ಟಡ ಕಾಮಗಾರಿ ಪೂರ್ಣಗೊಳ್ಳಲಿದೆ," ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಅಲಿ-ಆಸ್ಕರ್ ರಸ್ತೆಯಲ್ಲಿರುವ ಸಹಕಾರ ಸಂಘಗಳ ನಿಬಂಧಕರ ಕಛೇರಿ ಆವರಣದಲ್ಲಿ ರಾಜ್ಯ ಸರ್ಕಾರದಿಂದ ನಿರ್ಮಾಣ ಮಾಡಲಾಗುತ್ತಿರುವ "ಸಹಕಾರ ಸಮೃದ್ಧಿ ಸೌಧ" ಕಟ್ಟಡ ನಿರ್ಮಾಣದ ಗುದ್ದಲಿ ಪೂಜೆ ನೆರವೇರಿಸಿ ದಿನಾಂಕ:14.06.2023ರ ಬುಧವಾರದಂದು ಅವರು ಮಾತನಾಡಿದರು.

7 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಸಹಕಾರ ಸಮೃದ್ಧಿ ಸೌಧ ಕಟ್ಟಡವು ನಿರ್ಮಾಣವಾಗುತ್ತಿದೆ. ಕಟ್ಟಡವು ಮೂರು ಅಂತಸ್ಥುಗಳನ್ನು ಹೊಂದಿದೆ. ಕಟ್ಟಡ ನಿರ್ಮಾಣಕ್ಕೆ ಸಹಕಾರ ಇಲಾಖೆಯ ಸಹಕಾರ ಅಭಿವೃದ್ಧಿ ನಿಧಿಯಿಂದ ವೆಚ್ಚ ಭರಿಸಲು ಸರಕಾರದಿಂದ ಅನುಮೋದನೆ ಪಡೆಯಲಾಗಿದೆ. ರಾಜ್ಯ ಗೃಹ ಮಂಡಳಿಯು ಈ ಯೋಜನೆಯ ಕಾಮಗಾರಿಯ ಜವಾಬ್ದಾರಿ ವಹಿಸಿಕೊಂಡಿದೆ. ಶಂಕು ಸ್ಥಾಪನೆ ಕಾರ್ಯಕ್ರಮದಲ್ಲಿ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ, ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋಧ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲ, ವಸತಿ ಮತ್ತು ವಕ್ಫ್ ಸಚಿವರಾದ ಜಮೀರ್ ಅಹಮದ್ ಖಾನ್, ಜವಳಿ, ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವರಾದ ಶ್ರೀ ಶಿವಾನಂದ ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.


2 ಕೇಂದ್ರ ಸರ್ಕಾರಕ್ಕೆ ಭರ್ಜರಿ ರೂ. 5,740 ಕೋಟಿ ಲಾಭಾಂಶ ನೀಡಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

4 ಬೆಳಗಾವಿಯಲ್ಲಿ ಜೂನ್ 27 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಹಿರಿಯ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ತರಬೇತಿ ಶಿಬಿರ

7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಅತ್ಮೀಯ ಸಹಕಾರಿಗಳೇ...



### ರೈತರ ಆದಾಯವನ್ನು ಹೆಚ್ಚಿಸುವ ಹಾಗೂ ಜನರ ಆರೋಗ್ಯ ರಕ್ಷಿಸುವ ನೀರಾ ತಯಾರಿಕೆ, ವಿತರಣೆಯಲ್ಲಿ ಸಹಕಾರ ವ್ಯವಸ್ಥೆ ರೂಪುಗೊಳ್ಳಲಿ

ಇತ್ತೀಚಿನ ದಿನಗಳಲ್ಲಿ ನಾನು ಓದಿದ ಒಂದು ಒಳ್ಳೆ ಸುದ್ದಿಯ ಬಗ್ಗೆ ನಿಮ್ಮೆಲ್ಲರ ಗಮನ ಸೆಳೆಯ ಬಯಸುತ್ತೇನೆ; ಅದು ನೀರಾ ಕುರಿತದ್ದು. ಉಡುಪಿಯ ಕೆಲ ರೈತರೇ ಸೇರಿ ರಚಿಸಿಕೊಂಡಿರುವ ಮಸಾಲೆ ಉತ್ಪಾದಕರ ಕಂಪನಿಯೊಂದು ತೆಂಗಿನ ಮರದಿಂದ ನೀರಾ ಇಳಿಸಿ ಕಲ್ಪರಸ ಎನ್ನುವ ಹೆಸರಿನೊಂದಿಗೆ ಮಾರಾಟ ಮಾಡುತ್ತಿದ್ದು, ಅದು ಜನಪ್ರಿಯಗೊಂಡಿರುವುದಾಗಿ ವರದಿಯಾಗಿದೆ.

ತೆಂಗಿನ ಮರದ ಇನ್ನೂ ಅರಳದ ಹೊಂಬಾಳೆಯಿಂದ ಇಳಿಸಲಾಗುವ ಸಿಹಿಯಾದ ಸಸ್ಯ ರಸವೇ ನೀರಾ. ನೀರಾ ಎಂದರೆ ಹೆಂಡ, ಸಾರಾಯಿಯಂಥ ಮಾದಕಪೇಯ ಎಂಬ ಕಲ್ಪನೆ ಬಹುತೇಕರಲ್ಲಿದೆ. ಪರಿಶುದ್ಧ ನೀರಾ ಅತ್ಯದ್ಭುತ ಔಷಧೀಯ ಗುಣಗಳ ಆಗರವೂ ಹೌದು ಎನ್ನುವುದು ಬಹುತೇಕರಿಗೆ ಗೊತ್ತಿರಲಿಕ್ಕಿಲ್ಲ. ದೇಹದ ರೋಗ ನಿರೋಧಕ ಶಕ್ತಿ ಹೆಚ್ಚಿಸುವ, ನರದೌರ್ಬಲ್ಯ ನೀಗುವ ಸಾಮರ್ಥ್ಯ ನೀರಾಗೆ ಇದೆ. ನೀರಾದಲ್ಲಿ ಇರುವ ಪೋಷಕಾಂಶಗಳ ಬಗ್ಗೆ ಮೈಸೂರಿನ ಸಿಎಫ್‌ಟಿಆರ್‌ಐ ಪರೀಕ್ಷೆ ಮಾಡಿ, ನೀರಾ ಮದ್ಯವಲ್ಲ, ಪೋಷಕಾಂಶಗಳಿಂದ ತುಂಬಿರುವ ಪಾನೀಯ ಎಂದು ಈ ಹಿಂದೆಯೇ ಪ್ರಮಾಣೀಕರಿಸಿದೆ.

ಕೆಲ ವರ್ಷಗಳ ಹಿಂದೆಯೇ ನಮ್ಮ ರಾಜ್ಯ ಸರ್ಕಾರ, ಅಬಕಾರಿ ಕಾಯ್ದೆಗೆ ಒಂದು ತಿದ್ದುಪಡಿ ತಂದಿದ್ದು, ನೀರಾ ಇಳಿಸುವುದನ್ನು, ಮಾರಾಟ ಮಾಡುವುದನ್ನು ಸಕ್ರಮಗೊಳಿಸಿರುವುದು ಕೆಲವರಿಗಾದರೂ ನೆನಪಿರಬಹುದು. ಇದೊಂದು ತೆಂಗು ಕೃಷಿಕರ ನೆರವಿಗೇ ರೂಪಿಸಲಾದ ಕಾಯ್ದೆಯಾಗಿದೆ. ರೈತರು ನೀರಾ ಇಳಿಸುವ ಮೂಲಕ ನುಸಿ ಪೀಡೆಯಿಂದಲ್ಲೂ ಮರಗಳನ್ನು ಕಾಪಾಡಿಕೊಳ್ಳಬಹುದಾಗಿದೆ.

ನಮಗೂ ಮುಂಚಿತವಾಗಿ 2014ರಲ್ಲೇ ಕೇರಳ ರಾಜ್ಯದಲ್ಲಿ ಜಾರಿಗೆ ಬಂದ ನೀರಾ ನೀತಿಯಿಂದಾಗಿ ಅಲ್ಲಿನ ತೆಂಗು ಕೃಷಿಕರ ಬದುಕು ಹಸನಾಗಿದೆ ಎಂಬ ವರದಿಗಳಿವೆ. ಅಲ್ಲಿ ತಯಾರಾಗುವ ನೀರಾ ಬೆಲ್ಲ, ಸಕ್ಕರೆ ಪ್ರಸಿದ್ಧಿ ಪಡೆದಿದೆ. 7 ಲೀಟರ್ ನೀರಾದಿಂದ ಒಂದು ಕೆ.ಜಿ ಬೆಲ್ಲ ತಯಾರಿಸಬಹುದು. ಜೊತೆಗೆ ಚಾಕೊಲೇಟ್, ಐಸ್ ಕ್ರೀಮ್, ಐಸ್ ಕ್ಯಾಂಡಿ, ಪೇಡಾ, ಸಕ್ಕರೆ, ಕಲ್ಲು ಸಕ್ಕರೆ, ಕಾಕಂಬಿಯನ್ನೂ ನೀರಾದಿಂದ ತಯಾರಿಸಬಹುದು ಎಂದು ಅವರು ತೋರಿಸಿಕೊಟ್ಟಿದ್ದಾರೆ.

ನಮ್ಮಲ್ಲೂ ನೀರಾದಿಂದ ರೂಪಿಸಬಹುದಾದ ಉಪ–ಉತ್ಪನ್ನಗಳ ಕುರಿತಾಗಿಯೂ ಸಂಶೋಧನೆ, ಚಿಂತನ–ಮಂಥನಗಳು ನಡೆಯಬೇಕಿದೆ. ನೀರಾ ಉಪ ಉತ್ಪನ್ನಗಳನ್ನು ತಯಾರಿಸಲು ಅದರಿಂದ ಮತ್ತಷ್ಟು ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ ಕುರಿತು ಹೊಸ ಯತ್ನಗಳಾಗಬೇಕು ಹಾಗೂ ಅದಕ್ಕೊಂದು ಉದ್ಯಮ ರೂಪ ಕೊಡಬೇಕಾಗಿದೆ.

ನಮ್ಮ ಸಹಕಾರ ಕ್ಷೇತ್ರದ ನೆರವಿನಿಂದ ಗ್ರಾಮೀಣ ಭಾಗದಲ್ಲಿ ಹಾಲಿನ ಹೊಳೆಯೇ ಹರಿದಿರುವುದನ್ನು, ರೈತ ಮಹಿಳೆಯರ ಮೊಗದಲ್ಲಿ ಹರ್ಷತಂದಿರುವುದನ್ನು ಎಲ್ಲೆಡೆ ಕಾಣುತ್ತಿದ್ದೇವೆ. ತೆಂಗು ಬೆಳೆಗಾರರ ಸಮಸ್ಯೆಗಳನ್ನು ನೀಗುವುದಕ್ಕೆಂದು ಸಹಕಾರಿ ತತ್ತ್ವದ ಆಧಾರದ ಮೇಲೆ ರೈತರು ಇಳಿಸಿದ ನೀರಾವನ್ನು ರೈತರಿಂದ ಹಾಲು ಕೊಳ್ಳುವ ಮಾದರಿಯಲ್ಲಿ ಖರೀದಿಸುವಂತೆ ಸಹಕಾರ ಸಂಸ್ಥೆಯೊಂದನ್ನು ರೂಪಿಸಬೇಕಿದೆ. ಈ ನಿಟ್ಟಿನಲ್ಲಿ ಕೃಷಿಕರ, ತಜ್ಞರು, ಸಹಕಾರ ಸಂಸ್ಥೆಗಳು ಪರಸ್ಪರ ಕೈಜೋಡಿಸಿ ಯೋಜನೆ ರೂಪಿಸಲಿ. ರೈತರ ಆದಾಯವನ್ನು ಹೆಚ್ಚಿಸುವ ಹಾಗೂ ಜನರ ಆರೋಗ್ಯ ರಕ್ಷಿಸುವ, ನೀರಾ ಉದ್ಯಮವನ್ನು ಎಲ್ಲರೂ ಬೆಂಬಲಿಸಬೇಕಿದೆ ಹಾಗೂ ಪ್ರೋತ್ಸಾಹಿಸಬೇಕಿದೆ.

▸▸ ಎಚ್.ಕೆ. ಪಾಟೀಲ್

## ಕೇಂದ್ರ ಸರ್ಕಾರಕ್ಕೆ ಭರ್ಜರಿ ರೂ. 5,740 ಕೋಟಿ ಲಾಭಾಂಶ ನೀಡಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

**ನವದೆಹಲಿ :** ದೇಶದ ಅತಿದೊಡ್ಡ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 2022–23ನೇ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರಕ್ಕೆ ಭರ್ಜರಿ ಲಾಭಾಂಶವನ್ನು ನೀಡಿದೆ. ಈ ಲಾಭಾಂಶದ ಚೆಕ್ ಅನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಾರ್ವಜನಿಕ ಸ್ವಾಮ್ಯದ ಬ್ಯಾಂಕ್ ಎಸ್‌ಬಿಐನ ಅಧ್ಯಕ್ಷ ದಿನೇಶ್ ಕುಮಾರ್ ಖರ ಹಸ್ತಾಂತರಿಸಿದರು. ವಿಶೇಷವೆಂದರೆ ಇದು ಇಲ್ಲಿಯವರೆಗೆ ಕೇಂದ್ರಕ್ಕೆ ಎಸ್‌ಬಿಐ ಪಾವತಿಸಿದ ಅತಿದೊಡ್ಡ ಲಾಭಾಂಶವಾಗಿದೆ.

**ಸಾರ್ವಜನಿಕ ವಲಯದ ಕಂಪನಿಗಳಿಂದ ಕೇಂದ್ರ ಸರ್ಕಾರಕ್ಕೆ ರೂ. 63,000 ಕೋಟಿ ಲಾಭಾಂಶ :** ಮಾರ್ಚ್ 31, 2023ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪ್ರತಿ ಈಕ್ವಿಟಿ ಷೇರಿಗೆ ರೂ. 11.30 (ಶೇ. 1,130) ಲಾಭಾಂಶವನ್ನು ಘೋಷಿಸಿತ್ತು. ಕೇಂದ್ರ ಸರಕಾರ ಬ್ಯಾಂಕ್‌ನ ಅತಿದೊಡ್ಡ ಷೇರುದಾರನಾಗಿದ್ದು, ಇದರಿಂದ ಹೆಚ್ಚಿನ ಲಾಭಾಂಶವನ್ನು ಪಡೆದುಕೊಂಡಿದೆ. ಇದಲ್ಲದೆ ದೇಶದ ಅತಿದೊಡ್ಡ ಬ್ಯಾಂಕ್ ಎಸ್‌ಬಿಐ ಕಳೆದ ಹಣಕಾಸು ವರ್ಷದಲ್ಲಿ ಸರ್ಕಾರಕ್ಕೆ 17,648.67 ಕೋಟಿ ರೂಪಾಯಿಗಳನ್ನು ತೆರಿಗೆಯಾಗಿ ನೀಡಿದೆ.

ಯುಟಿಐ ಮ್ಯೂಚುವಲ್ ಫಂಡ್‌ನ ಪ್ರಾಯೋಜಕ ಸಂಸ್ಥೆಗಳಾಗಿರುವ ಎಸ್‌ಬಿಐ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಲೈಫ್ ಇನ್ಶುರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ದೇಶದ ಅತ್ಯಂತ ಹಳೆಯ ಫಂಡ್ ಹೌಸ್ ಯುಟಿಐ ಮ್ಯೂಚುವಲ್ ಫಂಡ್‌ನಲ್ಲಿ ತಮ್ಮ ಪಾಲನ್ನು ಕಡಿಮೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿವೆ. ಮೂಲಗಳ ಪ್ರಕಾರ ಈ ಸಂಸ್ಥೆಗಳು ಷೇರು ಮಾರಾಟದ ಕುರಿತು ಸಲಹೆಗಾಗಿ ಮರ್ಚೆಂಟ್ ಬ್ಯಾಂಕರ್‌ಗಳನ್ನು ಸಂಪರ್ಕಿಸಿವೆ.

**ಎಸ್‌ಬಿಐ ಲಾಭವೂ ಹೆಚ್ಚಳ :** ಕಳೆದ ಹಣಕಾಸು ವರ್ಷದಲ್ಲಿ (2022–23) ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಲಾಭ ಒಟ್ಟಾರೆಯಾಗಿ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ದಾಟಿದೆ. ಇದರಲ್ಲಿ ಅರ್ಧದಷ್ಟು ದೇಶದ ಅತಿ ದೊಡ್ಡ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ್ದೇ ಆಗಿತ್ತು. ಉಳಿದ 11 ಸಾರ್ವಜನಿಕ ವಲಯದ ಬ್ಯಾಂಕುಗಳು ಎಸ್‌ಬಿಐನಷ್ಟೇ ಲಾಭ ಗಳಿಸಿವೆ.

# 7ನೇ ಅಖಿಲ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಸಮ್ಮೇಳನ – 2023



ದಿನಾಂಕ : 13.06.2023 ಮತ್ತು 14.06.2023ರಂದು ಮುಂಬಯಿನಲ್ಲಿ 7ನೇ ಅಖಿಲ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಸಮ್ಮೇಳನವು ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ನವದೆಹಲಿ (NAFCUB, New Delhi) ಮತ್ತು ಬಿ2ಬಿ ಸಹಯೋಗದೊಂದಿಗೆ ಜರುಗಿತು. ಈ ಸಮ್ಮೇಳನದಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಉಪಸ್ಥಿತರಿದ್ದರು.

## ಕೋ–ಆಪರೇಟಿವ್ ಬ್ಯಾಂಕ್ ಆಫ್ ಇಂಡಿಯಾದ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ





**ನವದೆಹಲಿ :** ದಿನಾಂಕ : 15.06.2023ರಂದು ಜರುಗಿದ ಕೋ–ಆಪರೇಟಿವ್ ಬ್ಯಾಂಕ್ ಆಫ್ ಇಂಡಿಯಾ (COBI) ನವದೆಹಲಿ ಇದರ ಸಾಮಾನ್ಯ ಸಭೆಯಲ್ಲಿ ನೂತನ ಅಧ್ಯಕ್ಷರಾಗಿ ಶ್ರೀ ಅಜಯ್ ಎಚ್. ಪಟೇಲ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಮಿಲಿಂದ ಅನಂತ ಕಾಳೆ ರವರುಗಳು ಆಯ್ಕೆಯಾಗಿದ್ದಾರೆ. ನಿರ್ದೇಶಕರುಗಳಾಗಿ ನ್ಯಾಫಕಭ್‌ನ ಚೇರಮನ ಎಮಿರಟಸ್‌ರವರಾದ ಶ್ರೀ ಎಚ್.ಕೆ. ಪಾಟೀಲ, ಶ್ರೀ ಕೆ.ಎಲ್. ಪಾಟೀಲ, ಶ್ರೀ ರುದ್ರೇಗೌಡ ರವರುಗಳು ಆಯ್ಕೆಯಾಗಿದ್ದಾರೆ.

## ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕಿನ ಪೆರ್ಡೂರು ಶಾಖೆಯಲ್ಲಿ ಹವಾನಿಯಂತ್ರಣದ ಉದ್ಘಾಟನೆ ಹಾಗೂ ಗ್ರಾಹಕರ ಸಮಾವೇಶ



ಉಡುಪಿ ಕೋ ಆಪರೇಟಿವ್ ಟೌನ್ ಬ್ಯಾಂಕಿನ ಪೆರ್ಡೂರು ಶಾಖೆಯ ಹವಾನಿಯಂತ್ರಣದ ಉದ್ಘಾಟನೆ ಹಾಗೂ ಗ್ರಾಹಕರ ಸಮಾವೇಶ ಬ್ಯಾಂಕಿನ ಪೆರ್ಡೂರು ಶಾಖೆಯಲ್ಲಿ ಇತ್ತೀಚೆಗೆ ನಡೆಯಿತು. ಪೆರ್ಡೂರು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ದೇವು ಪೂಜಾರಿಯವರು ಹವಾನಿಯಂತ್ರಣ ವ್ಯವಸ್ಥೆಯನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ರಘುಪ್ರಸಾದ ಅಡಿಗರವರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಉತ್ತಮ ಗ್ರಾಹಕರನ್ನು ಗುರುತಿಸಿ ಸನ್ಮಾನಿಸಲಾಯಿತು ಹಾಗೂ ಅವರಿಂದ ಬ್ಯಾಂಕಿನ ಪ್ರಗತಿಯ ಬಗ್ಗೆ ಸಲಹೆ ಸೂಚನೆಗಳನ್ನು ಪಡೆಯಲಾಯಿತು. ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯರವರು ಪ್ರಸ್ತಾವನೆಗೈದರು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಪಿ. ರಾಘವೇಂದ್ರ ಭಟ್, ನಿರ್ದೇಶಕರಾದ ಶ್ರೀಮತಿ ಮನೋರಮಾ ಎಸ್.,ಶ್ರೀ ಭಾಸ್ಕರ್ ರಾವ್ ಕಿದಿಯೂರು, ಶ್ರೀ ಪ್ರಹ್ಲಾದ್ ಬಲ್ಲಾಳ್ ಎನ್., ಶ್ರೀ ಸೂರ್ಯಪ್ರಕಾಶ್ ರಾವ್ ಎನ್., ಮುಖ್ಯ ಸಲಹೆಗಾರರಾದ ಶ್ರೀ ಎಸ್. ಕುಮಾರಸ್ವಾಮಿ ಉಡುಪ ಉಪಸ್ಥಿತರಿದ್ದರು. ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಕೆ. ಹರಿಪ್ರಸಾದ್‌ರವರು ಕಾರ್ಯಕ್ರಮ ನಿರೂಪಿಸಿದರು. ಬ್ಯಾಂಕಿನ ಪೆರ್ಡೂರು ಶಾಖಾ ವ್ಯವಸ್ಥಾಪಕರಾದ ಶ್ರೀ ಅರುಣ್ ಕುಮಾರ್ ಯು.ಬಿ.ಯವರು ವಂದಿಸಿದರು.

## ಬೆಳಗಾವಿಯಲ್ಲಿ ಜೂನ್ 27 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಹಿರಿಯ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ತರಬೇತಿ ಶಿಬಿರ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ದಿನಾಂಕ : 27ನೇ ಜೂನ್ 2023ರ ಮಂಗಳವಾರ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಹಿರಿಯ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ತರಬೇತಿ ಶಿಬಿರವನ್ನು "ಹೋಟೆಲ್ ಆದರ್ಶ ಪ್ಯಾಲೇಸ್", ಕಾಲೇಜ್ ರಸ್ತೆ, ಬೆಳಗಾವಿ ಇಲ್ಲಿ ಏರ್ಪಡಿಸಲಾಗಿದೆ.

ಈ ತರಬೇತಿ ಶಿಬಿರದಲ್ಲಿ "ಇನವೆಸ್ಟಮೆಂಟ್ ಮ್ಯಾನೇಜ್‌ಮೆಂಟ್, "ರಿಕವರಿ ಮ್ಯಾನೇಜ್‌ಮೆಂಟ್", ಇತ್ತೀಚಿನ ಆರ್‌ಬಿಐ ಮಾರ್ಗಸೂಚಿಗಳು : (1) ಫ್ರೇಮವರ್ಕ ಫಾರ್ ಕಂಪ್ರಾಮೈಸ್ ಸೆಟಲ್‌ಮೆಂಟ್ಸ್ ಆ್ಯಂಡ್ ಟೆಕ್ನಿಕಲ್ ರೈಟ್-ಆಫ್ (2) ರೆಸಿಯೋನೈಲೈಜೇಷನ್ ಆಫ್ ಬ್ರಾಂಚ್ ಅಥರೈಜೇಷನ್ ಪಾಲಿಸಿ ಫಾರ್ ಯುಸಿಬಿಸ್. (3) ಪ್ರಿಯಾರಿಟಿ ಸೆಕ್ಟರ್ ಲೆಂಡಿಂಗ್ ಟಾರ್ಗೆಟ್ಸ್ / ಸಬ್-ಟಾರ್ಗೆಟ್ಸ್, ಡಿಜಿಟಲ್ ಬ್ಯಾಂಕಿಂಗ್ ಅಂಡ ಟೆಕ್ನಾಲಜಿ ಇಂಪ್ಲಿಮೆಂಟೇಷನ್ ವಿಷಯಗಳ ಕುರಿತು ನುರಿತ ತಜ್ಞರುಗಳು ಉಪನ್ಯಾಸ ನೀಡಲಿದ್ದಾರೆ.

ಸದರಿ ಕಾರ್ಯಕ್ರಮವನ್ನು ದಿನಾಂಕ: 27.06.2023 ರಂದು ಬೆಳಿಗ್ಗೆ 08.30 ಗಂಟೆಗೆ ಉಪಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು. ಪ್ರಯುಕ್ತ, ಈ ತರಬೇತಿ ಶಿಬಿರದಲ್ಲಿ ಭಾಗವಹಿಸುವವರು ಮಹಾಮಂಡಳದಲ್ಲಿ ದಿನಾಂಕ: 23.06.2023 ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಈ ತರಬೇತಿ ಶಿಬಿರದಲ್ಲಿ ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ತಿಳಿಸಿರುತ್ತಾರೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕರನ್ನು ಹೊರತುಪಡಿಸಿ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ ಏರ್ಪಡಿಸಿರುವ ಕುರಿತು

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಐದು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme) ಯನ್ನು ಪ್ರಾರಂಭಿಸಲಾಗಿದೆ.

ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ಏರ್ಪಡಿಸಲಾಗಿದೆ. ಈ ಸದರಿ ತರಬೇತಿಯನ್ನು ದಿನಾಂಕ : 03.07.2023ರಿಂದ ದಿನಾಂಕ : 07.07.2023ರವರೆಗೆ ಬೆಳಿಗ್ಗೆ 09.00 ಗಂಟೆಯಿಂದ ಸಾಯಂಕಾಲ 05.30 ಗಂಟೆಯವರೆಗೆ ಒಟ್ಟು ಐದು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ) ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು-560 070 ಇಲ್ಲಿ ಏರ್ಪಡಿಸಲಾಗಿದೆ.

ಈ ಐದು ದಿನಗಳ ತರಬೇತಿ ಶಿಬಿರದಲ್ಲಿ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ನೋಂದಾಯಿಸಿದ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿರುತ್ತದೆ.

ಈ ತರಬೇತಿ ಶಿಬಿರದ ಶುಲ್ಕದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ದಿನಾಂಕ : 16.06.2023ರಂದು ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಬರೆದಿರುವ ಪತ್ರವನ್ನು ತಾವು ತಮ್ಮ ಬ್ಯಾಂಕಿನ ಇ-ಮೇಲ್‌ನಲ್ಲಿ ನೋಡಬಹುದು. ಪ್ರತಿನಿಧಿ ಶುಲ್ಕವನ್ನು ಚೆಕ್ / ಡಿ.ಡಿ ಅಥವಾ ಎನ್‌ಇಎಫ್‌ಟಿ ಮುಖಾಂತರ ದಿನಾಂಕ : 30.06.2023ರೊಳಗಾಗಿ ಪಾವತಿಸಿ ಮಹಾಮಂಡಳದಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಅಧಿಕಾರಿಗಳಾದ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ರವರುಗಳನ್ನು ಸಂಪರ್ಕಿಸಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ತಿಳಿಸಿರುತ್ತಾರೆ.

## 9ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್(ಡಿಯುಸಿಬಿಎಂ)ನ ಲಿಖಿತ ಪರೀಕ್ಷೆಗಳು ಜೂ. 24, 25, ಮತ್ತು ಜುಲೈ 2, 2023 ರಂದು

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ "ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್" ಕೋರ್ಸ್‌ನ್ನು ಈಗಾಗಲೇ ಪ್ರಾರಂಭಿಸಿರುತ್ತದೆ. ಸದರಿ ಕೋರ್ಸ್‌ಗೆ ಈಗಾಗಲೇ ತಾವು ಅಭ್ಯರ್ಥಿಯಾಗಿ ಪ್ರವೇಶ ಪಡೆದಿರುತ್ತೀರಿ. ಲಿಖಿತ ಪರೀಕ್ಷೆ ದಿನಾಂಕವನ್ನು ಆರ್‌ಐಸಿಎಂ (ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು) ಬೆಂಗಳೂರು ಇವರು ದಿನಾಂಕ : 24.06.2023, 25.06.2023 & ದಿನಾಂಕ : 02.07.2023ರಂದು ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 05.00 ಗಂಟೆಯವರಿಗೆ ಬೆಂಗಳೂರು, ಆರ್‌ಐಸಿಎಂ, ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು-70 ಮತ್ತು ಬಾಗಲಕೋಟೆಯ ಅಜೀತ್ ಪಿ.ಯು. ಅಕಾಡೆಮಿ ಕಾಲೇಜ್, ಹಿಂದುಸ್ತಾನಿ ಸೇವಾದಳ ಕ್ಯಾಂಪಸ್, ಸೆಕ್ಟರ್ ನಂ.63ಎ, ಬೃಂದಾವನ ಸೆಕ್ಟರ್, ಸಿ-ರಸ್ತೆ, ಸೆಂಟ್ ಮೇರಿಸ್ ಚರ್ಚ್ ಹತ್ತಿರ, ನವನಗರ, ಬಾಗಲಕೋಟೆ – 587103. ಈ ಕೇಂದ್ರಗಳಲ್ಲಿ ಪರೀಕ್ಷೆಗಳು ಜರುಗಲಿವೆ.

ಅಭ್ಯರ್ಥಿಗಳು ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು. ಆದ್ದರಿಂದ ತಾವು ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಸಂಪರ್ಕಾಧಿಕಾರಿ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ರವರುಗಳನ್ನು ಸಂಪರ್ಕಿಸಬಹುದಾಗಿದೆ.

## ಶ್ರೀ ವಿಜಯ ಮಹಾಂತೇಶ ಸಹಕಾರಿ ಬ್ಯಾಂಕ್ : ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ



ಶ್ರೀ ವಿಜಯ ಮಹಾಂತೇಶ ಸಹಕಾರ ಬ್ಯಾಂಕ ನಿ., ಹುನಗುಂದ ಇದರ ಬಾಕಿ ಉಳಿದ ಅವಧಿಗೆ ದಿನಾಂಕ:27.05.2023ರಂದು ಜರುಗಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಶ್ರೀ ರವಿ ಮಹಾಂತಪ್ಪ ಹುಚನೂರ ಅಧ್ಯಕ್ಷರಾಗಿ ಮತ್ತು ಶ್ರೀ ದೇವಣ್ಣ ರಾಮಲಿಂಗಪ್ಪ ಡಂಬಳ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಪತ್ರಿಕೆಗೆ ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ ಬ್ಯಾಂಕಿನ ಎಲ್ಲಾ ಆಡಳಿತ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಎಮ್‌ಸಿಸಿ ಬ್ಯಾಂಕಿನ ವಾರ್ಷಿಕ ಪ್ರಗತಿ ಪರಿಶೀಲನೆ

ಮಂಗಳೂರು ಕಥೋಲಿಕ್ ಕೋ ಆಪರೇಟಿವ್ (ಎಮ್.ಸಿ.ಸಿ.) ಬ್ಯಾಂಕಿನ ವಾರ್ಷಿಕ ಪ್ರಗತಿ ಪರಿಶೀಲನೆಯು ದಿನಾಂಕ : 13.06.2023ರಂದು ಬ್ಯಾಂಕಿನ ಪಿ.ಎಫ್.ಎಕ್ಸ್. ಸಲ್ಡಾನ್ಹಾ ಮೆಮೊರಿಯಲ್ ಸಭಾಂಗಣದಲ್ಲಿ ನಡೆಯಿತು. ಬ್ಯಾಂಕಿನ ಅಧ್ಯಕ್ಷ ಶ್ರೀ ಅನಿಲ್ ಲೋಬೊರವರು ಅಧ್ಯಕ್ಷತೆಯನ್ನು ವಹಿಸಿದ್ದರು.



ಕಾರ್ಯಕ್ರಮವನ್ನು ರಾಕ್ಣೊ ಕೊಂಕಣಿ ವಾರಪತ್ರಿಕೆಯ ಸಂಪಾದಕ ವಂದನೀಯ ರೂಪೇಶ್ ಮಾಡ್ತಾರವರು ದೀಪ ಬೆಳಗಿಸುವ ಮುಖಾಂತರ ಉದ್ಘಾಟಿಸಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತಾನಾಡಿದ ವಂದನೀಯ ರೂಪೇಶ್ ಮಾಡ್ತಾ ಕಳೆದ ದಶಕದಲ್ಲಿ ಬ್ಯಾಂಕ್ ಸಾಧಿಸಿರುವ ಅಗಾಧ ಪ್ರಗತಿಗಾಗಿ ಆಡಳಿತ ಮಂಡಳಿ ಹಾಗು ಸಿಬ್ಬಂದಿ ವರ್ಗವನ್ನು ಅಭಿನಂದಿಸಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ವಹಿಸಿ ಮತಾನಾಡಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅನಿಲ್ ಲೋಬೊ ಬ್ಯಾಂಕಿನ ಪ್ರಗತಿಗಾಗಿ ಸಮರ್ಪಿತ ಸೇವೆಯನ್ನು ನೀಡಿದ ಸಿಬ್ಬಂದಿ ವರ್ಗವನ್ನು ಅಭಿನಂದಿಸಿದರು. ಬ್ಯಾಂಕ್ 111 ವರ್ಷಗಳನ್ನು ಪೊರೈಸುತ್ತಿರುವ ಸಂದರ್ಭದಲ್ಲಿ ಕಡಿಮೆ ವೆಚ್ಚದ ಠೇವಣಿಗಳನ್ನು ಮತ್ತು ಸಾಲ ಮತ್ತು ಮುಂಗಡಗಳನ್ನು ಹೆಚ್ಚಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು. ನಿರ್ದೇಶಕರಾದ ಅನಿಲ್ ಪತ್ರಾವೊ, ಅಂಡ್ರು ಡಿಸೋಜ, ಡೆವಿಡ್ ಡಿ'ಸೋಜ, ಹೆರಾಲ್ಡ್ ಮೊಂತೇರೊ, ರೋಶನ್ ಡಿಸೋಜ, ಮಾರ್ಸೆಲ್ ಡಿಸೋಜ, ಡಾ। ಜೆರಾಲ್ಡ್ ಪಿಂಟೊ, ಎಲ್‌ರೋಯ್ ಕಿರಣ್ ಕ್ರಾಸ್ಟೊ, ಐರಿನ್ ರೆಬೆಲ್ಲೊ, ಡಾ। ಫ್ರೀಡಾ ಡಿಸೋಜಾ, ಸುಶಾಂತ್ ಸಲ್ಡಾನ್ಹಾ, ಶರ್ಮಿಳಾ ಮೀನೇಜಸ್, ಆಲ್ವಿನ್ ಮೊಂತೇರೊ, ಫೆಲಿಕ್ಸ್ ಡಿಕ್ರೂಜ್, ಬ್ಯಾಂಕಿನ ಮಹಾ ಪ್ರಬಂಧಕರಾದ ಸುನಿಲ್ ಮಿನೇಜಸ್ ಹಾಜರಿದ್ದರು.

## ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : ಲೋಕಾಪೂರ ಮತ್ತು ಮುಧೋಳ ನೂತನ ಶಾಖೆಗಳ ಉದ್ಘಾಟನೆ



ದಿನಾಂಕ: 12.06.2023 ರಂದು ದಿ ಜಮಖಂಡಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಲೋಕಾಪುರದ ನೂತನ ಶಾಖೆಯ ಉದ್ಘಾಟನೆಯನ್ನು ಬಾಗಲಕೋಟೆ ಲೋಕಸಭಾ ಸದಸ್ಯರಾದ ಶ್ರೀ ಪಿ.ಸಿ. ಗದ್ದಿಗೌಡರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳು ಉಪಸ್ಥಿತರಿದ್ದರು.



ದಿನಾಂಕ : 12.06.2023 ರಂದು ದಿ ಜಮಖಂಡಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಮುಧೋಳ ನೂತನ ಶಾಖೆಯ ಉದ್ಘಾಟನೆಯನ್ನು ಅಬಕಾರಿ ಸಚಿವರಾದ ಶ್ರೀ ಆರ್.ಬಿ. ತಿಮ್ಮಾಪೂರ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳು ಉಪಸ್ಥಿತರಿದ್ದರು.

# ಆಘಾತಕಾರಿ ವರದಿ : ರಿಸರ್ವ್ ಬ್ಯಾಂಕ್ ಮುದ್ರಿಸಿದ್ದ 8,810.65 ಮಿಲಿಯನ್ ರೂ. 500 ಹೊಸ ನೋಟುಗಳು ನಾಪತ್ತೆ



**ನವದೆಹಲಿ :** ದೇಶಾದ್ಯಂತ 2000 ರೂ ಮುಖಬೆಲೆಯ ನೋಟುಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅಮಾನ್ಯ ಮಾಡಿ ಹಿಂದಕ್ಕೆ ಪಡೆಯುವ ಆದೇಶ ಮಾಡಿದ ಬೆನ್ನಲ್ಲೇ ದೇಶದಲ್ಲಿ ಗರಿಷ್ಠ ಮೌಲ್ಯದ ನೋಟಾಗಿ ಉಳಿದಿರುವ 500 ಮುಖಬೆಲೆಯ ಸುಮಾರು 8,810.65 ಮಿಲಿಯನ್ ನೋಟುಗಳೇ ನಾಪತ್ತೆಯಾಗಿದೆ ಎಂದು ತಿಳಿದುಬಂದಿದೆ.

ಈ ಬಗ್ಗೆ ಆರ್‌ಟಿಐ ಕಾರ್ಯಕರ್ತರೊಬ್ಬರು ಟ್ವಿಟರ್‌ನಲ್ಲಿ ಮಾಹಿತಿ ನೀಡಿದ್ದು, ದೇಶದ ಮೂರು ವಿವಿಧ ನೋಟು ಮುದ್ರಣಾಲಯದಲ್ಲಿ ಮುದ್ರಿಸಲಾದ ರೂ. 500 ನೋಟುಗಳ ಸಂಖ್ಯೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಸ್ವೀಕರಿಸಿದ ಸಂಖ್ಯೆಗಳ ನಡುವೆ ಭಾರಿ ವ್ಯತ್ಯಾಸ ಕಂಡು ಬಂದಿದೆ. ಲೆಕ್ಕಕ್ಕೆ ಸಿಗದ ನೋಟುಗಳ ಮೌಲ್ಯ ಸುಮಾರು ರೂ.88 ಸಾವಿರ ಕೋಟಿಯಷ್ಟಿದೆ ಎಂದು ಫ್ರೀ ಪ್ರೆಸ್ ಜರ್ನಲ್ ವರದಿ ಮಾಡಿದೆ.

ಇದೇ ವಿಚಾರವಾಗಿ ಪಲಕ್ ಶಾ ಎಂಬ ಆರ್‌ಟಿಐ ಕಾರ್ಯಕರ್ತ ಈ ಬಗ್ಗೆ ತಮ್ಮ ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದು, ಸರ್ಕಾರಿ ಮುದ್ರಣಾಲಯಗಳಲ್ಲಿ ಮುದ್ರಿಸಿದ ಸುಮಾರು 8,810.65 ನೋಟುಗಳ ಪೈಕಿ 7260 ಮಿಲಿಯನ್ ನೋಟುಗಳು ಮಾತ್ರ ಆರ್‌ಬಿಐ ಸ್ವೀಕರಿಸಿರುವುದಾಗಿ ತಿಳಿಸಿದೆ. ಹಾಗಾದರೇ ಬಾಕಿ 1550 ಮಿಲಿಯನ್ 500 ಮುಖಬೆಲೆಯ ನೋಟುಗಳು ಏನಾದವು ಎಂದು ಪ್ರಶ್ನೆ ಮಾಡಿದ್ದಾರೆ.

ಆರ್‌ಟಿಐ ಮಾಹಿತಿ ಪ್ರಕಾರ, ದೇಶದ ವಿವಿಧ ಮೂರು ಭಾರತೀಯ ಟಂಕಸಾಲೆಗಳು (ನೋಟು ಮುದ್ರಣಾಲಯಗಳು) ಹೊಸದಾಗಿ 8,810.65 ಮಿಲಿಯನ್ 500 ರೂ. ನೋಟುಗಳನ್ನು ಮುದ್ರಿಸಿ ಆರ್‌ಬಿಐಗೆ ನೀಡಿತ್ತು. ಆದರೆ ಭಾರತೀಯ ರಿಸರ್ವ್ ಬ್ಯಾಂಕ್ ಕೇವಲ 7260 ಮಿಲಿಯನ್ ನೋಟುಗಳನ್ನು ಮಾತ್ರ ಸ್ವೀಕರಿಸಿದೆ ಎಂದು ವರದಿ ಹೇಳಿದೆ. ಇದರಿಂದಾಗಿ ಉಳಿದ ನೋಟುಗಳು ಎಲ್ಲಿಗೆ ಹೋದವು ಎಂಬ ಪ್ರಶ್ನೆ ಮೂಡಿದೆ.

## ಆರ್‌ಬಿಐನಿಂದ ನೋಟುಗಳು ನಾಪತ್ತೆ ಕುರಿತ ವರದಿ ನಿರಾಕರಣೆ




**ನವದೆಹಲಿ :** ಭಾರತೀಯ ಆರ್ಥಿಕತೆಯಲ್ಲಿ ಭಾರೀ ಪ್ರಮಾಣದ ಹಣ ನಾಪತ್ತೆಯಾಗಿದೆ ಎಂದು ಆರ್‌ಟಿಐ ಮೂಲಕ ಮಾಹಿತಿ ಸಿಕ್ಕಿದ ನಂತರ, ಭಾರತೀಯ ರಿಸರ್ವ್ ಬ್ಯಾಂಕ್ ಈ ವದಂತಿಗಳಿಗೆ ತೆರೆ ಎಳೆಯಲು ಮುಂದಾಗಿದೆ. 500 ರೂ. ನೋಟುಗಳ ಬೃಹತ್ ಸಂಗ್ರಹವೇ ಕಾಣೆಯಾಗಿದೆ ಎಂದು ವರದಿಗಳು ಬಂದಿದ್ದು ಇದು ಸಂಪೂರ್ಣವಾಗಿ ಸುಳ್ಳು ಎಂದು ಆರ್‌ಬಿಐ ಸ್ಪಷ್ಟನೆ ನೀಡಿದೆ.

**ಏನು ಈ ಪ್ರಕರಣ? :** ಈ ಹಿಂದೆ, ಫ್ರೀ ಪ್ರೆಸ್ ಜರ್ನಲ್ ಪ್ರಕಟಿಸಿದ ವರದಿಯಲ್ಲಿ ಮನೋರಂಜನ್ ರಾಯ್ ಎಂಬ ಕಾರ್ಯಕರ್ತರಿಗೆ ಲಭಿಸಿದ್ದ ಆರ್‌ಟಿಐ ವರದಿಯನ್ನು ಉಲ್ಲೇಖಿಸಿ, ಭಾರತೀಯ ಆರ್ಥಿಕತೆಯಿಂದ 88,000 ಕೋಟಿ ರೂಪಾಯಿ ಮೌಲ್ಯದ 500 ರೂಪಾಯಿ ನೋಟುಗಳು ನಾಪತ್ತೆಯಾಗಿವೆ ಎಂದು ತಿಳಿದುಬಂದಿತ್ತು. ಆರ್‌ಟಿಐ ವರದಿಯ ಪ್ರಕಾರ ಮೂರು ಮುದ್ರಣಾಲಯಗಳ ದತ್ತಾಂಶವು ಹೊಸದಾಗಿ ವಿನ್ಯಾಸಗೊಳಿಸಲಾದ 500ರ 8810.65 ಮಿಲಿಯನ್ ನೋಟುಗಳನ್ನು ಮುದ್ರಿಸಲಾಗಿದೆ ಎಂದು ತೋರಿಸಿದ್ದು ಆದರೆ RBI ಕೇವಲ 7260 ಮಿಲಿಯನ್ ನೋಟುಗಳನ್ನು ಮಾತ್ರ ಹೊಂದಿದೆ ಎಂದು ತಿಳಿದು ಬಂದಿತ್ತು.

**ಲೆಕ್ಕ ಇಡಲು ಆರ್‌ಬಿಐ ಬಳಿ ಇರುವ ಸಾಧನ ಏನು? :** ಆರ್‌ಬಿಐ, ತನ್ನ ಸ್ಪಷ್ಟೀಕರಣದಲ್ಲಿ, ಈ ವರದಿಗಳು ಪ್ರಿಂಟಿಂಗ್ ಪ್ರೆಸ್‌ಗಳಿಂದ ಮಾಹಿತಿ ಹಕ್ಕು ಕಾಯ್ದೆ 2005 ರ ಅಡಿಯಲ್ಲಿ ಸಂಗ್ರಹಿಸಿದ ಮಾಹಿತಿಯ ತಪ್ಪಾದ ವ್ಯಾಖ್ಯಾನವನ್ನು ಆಧರಿಸಿವೆ. ಪ್ರಿಂಟಿಂಗ್ ಪ್ರೆಸ್‌ಗಳಿಂದ ಆರ್‌ಬಿಐಗೆ ಸರಬರಾಜು ಮಾಡಲಾದ ಎಲ್ಲಾ ನೋಟುಗಳನ್ನು ಸರಿಯಾಗಿ ಲೆಕ್ಕ ಹಾಕಲಾಗಿದೆ ಎಂದು ಗಮನಿಸಬಹುದು. ಆರ್‌ಬಿಐ ತನ್ನ ನೋಟಿಸ್‌ನಲ್ಲಿ, ಪ್ರೆಸ್‌ಗಳಲ್ಲಿ ಮುದ್ರಿಸಲಾದ ಮತ್ತು ಬ್ಯಾಂಕ್‌ನೋಟುಗಳ ಉತ್ಪಾದನೆ, ಸಂಗ್ರಹಣೆ ಮತ್ತು ವಿತರಣೆಯನ್ನು ಮೇಲ್ವಿಚಾರಣೆ ಮಾಡಲು ಪ್ರೋಟೋಕಾಲ್‌ಗಳನ್ನು ಒಳಗೊಂಡಿರುವ ದೃಢವಾದ ವ್ಯವಸ್ಥೆಗಳಿವೆ ಎಂದು ತಿಳಿಸಲಾಗಿದೆ.

# ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕಿಗೆ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್ ರಾಷ್ಟ್ರೀಯ ಗೌರವ



ಸಹಕಾರ ರಂಗದಲ್ಲಿ 111 ವರ್ಷಗಳ ಸಾರ್ಥಕ ಸೇವೆಯನ್ನು ಪೂರೈಸಿದ ಉಡುಪಿಯ ಪ್ರತಿಷ್ಠಿತ ಪಟ್ಟಣ ಸಹಕಾರ ಬ್ಯಾಂಕ್ ಆದ ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕ್ ಲಿ., ಗೆ ರಾಷ್ಟ್ರೀಯ ಗೌರವ ದೊರೆತಿದ್ದು ಮುಂಬಯಿಯಲ್ಲಿ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ನವದೆಹಲಿ (NAFCUB, New Delhi) ಮತ್ತು ಬಿ2ಬಿ ಸಹಯೋಗದೊಂದಿಗೆ ನಡೆದ 7ನೇ ಅಖಿಲ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಸಮ್ಮಿತ್–2023ರಲ್ಲಿ "ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್" ಪ್ರಶಸ್ತಿಯೊಂದಿಗೆ ರಾಷ್ಟ್ರೀಯ ಗೌರವವನ್ನು ನೀಡಲಾಯಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯ, ಮುಖ್ಯ ಸಲಹೆಗಾರರಾದ ಶ್ರೀ ಎಸ್. ಕುಮಾರಸ್ವಾಮಿ ಉಡುಪರವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕಿನ ಸೇವೆ ಮತ್ತು ಸಾಧನೆಗಳನ್ನು ಮಾನದಂಡವಾಗಿಟ್ಟುಕೊಂಡು ನೀಡಿದ ಈ ರಾಷ್ಟ್ರಮಟ್ಟದ ಪ್ರಶಸ್ತಿಯು ಬ್ಯಾಂಕಿನ ಗೌರವವನ್ನು ಇನ್ನಷ್ಟು ಹೆಚ್ಚಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರು ತಿಳಿಸಿರುತ್ತಾರೆ.

ಈ ಪ್ರಶಸ್ತಿ ಸಮಾರಂಭವನ್ನು RBI ನಿರ್ದೇಶಕರಾದ ಶ್ರೀ ಸತೀಶ್ ಮರಾಠೆ ಉದ್ಘಾಟಿಸಿದರು. NAFCUB ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾ, B2B ಸಹ ಸ್ಥಾಪಕರು ಹಾಗೂ ನಿರ್ದೇಶಕರಾದ ಶ್ರೀ ಗೌತಮ್ ನವೀನ್, ಮಹಾರಾಷ್ಟ್ರ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಅಜಯ್ ಬ್ರಹ್ಮೇಚ, ಪುಣೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಸಂಘದ ಅಧ್ಯಕ್ಷರಾದ ಶ್ರೀ ಸುಭಾಷ್ ಮೋಹಿತೆ, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೆರೂರೆ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಆಧುನಿಕ ಬ್ಯಾಂಕಿಂಗ್‌ನಲ್ಲಿ ಪ್ರಮುಖವಾಗಿರುವ Digital Banking, Cyber Security for Safe Banking, ಮತ್ತು Role of Technology in customer oriented Banking ಬಗ್ಗೆ ನುರಿತ ತಜ್ಞರುಗಳಿಂದ ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿತ್ತು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**ನಮ್ಮ ಬ್ಯಾಂಕಿನಲ್ಲಿ ಜಂಟಿ ಹೆಸರಿನಲ್ಲಿ ಸ್ಥಿರ ಠೇವಣಿ ಇದೆ. ಠೇವಣಿಯ ಕಾರ್ಯಾಚರಣೆಯ ಸೂಚನೆ "ಯಾರೊಬ್ಬರು ಅಥವಾ ಬದುಕುಳಿದವರು" (Either or Survivor) ಎಂದಿದೆ. ಹೀಗಿರುವಾಗ ಠೇವಣಿಯನ್ನು ಅವಧಿ ಮುಗಿದ ಮೇಲೆ ಮರುಪಾವತಿಸಲು ಇಬ್ಬರು ಠೇವಣಿದಾರರ ಸಹಿ ಬೇಕೆ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ತಾಳಿಕೋಟೆ.**

**ಉತ್ತರ :** ಸ್ಥಿರ / ಅವಧಿ ಠೇವಣಿಯನ್ನು "ಯಾರೊಬ್ಬರು ಅಥವಾ ಬದುಕುಳಿದವರು" ಎನ್ನುವ ಕಾರ್ಯಾಚರಣೆ ಸೂಚನೆಯೊಂದಿಗೆ ತೆರೆದರೆ ಠೇವಣಿಯನ್ನು ಅವಧಿ ಮುಕ್ತಾಯದ ನಂತರ ಮರುಪಾವತಿಸಲು ಎರಡೂ ಠೇವಣಿದಾರರ ಸಹಿ ಬೇಕಾಗಿಲ್ಲ.

ಆದಾಗ್ಯೂ, ಮುಕ್ತಾಯದ ಮೊದಲು ಠೇವಣಿ ಪಾವತಿಸಬೇಕಾದರೆ ಎರಡೂ ಠೇವಣಿದಾರರ ಸಹಿಗಳನ್ನು ಪಡೆಯಬೇಕು. ಠೇವಣಿ ಅವಧಿ ಮುಕ್ತಾಯದ ಮೊದಲು ಒಬ್ಬ ಠೇವಣಿದಾರ ಮೃತಪಟ್ಟರೆ ಮೃತಪಟ್ಟ ಠೇವಣಿದಾರನ ವಾರಸುದಾರರ ಸಹಿ ಇಲ್ಲದೆ ಠೇವಣಿಯನ್ನು ಅವಧಿ ಮುಕ್ತಾಯದ ಮುನ್ನ ಪಾವತಿಸುವಂತಿಲ್ಲ. ಆದರೆ ಅವಧಿ ಮುಗಿದ ನಂತರ ಠೇವಣಿಯನ್ನು ಬದುಕಿ ಉಳಿದ ಠೇವಣಿದಾರನಿಗೆ ಪಾವತಿಸಬಹುದು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- 3 ತಿಂಗಳ ಅವಧಿಯಲ್ಲಿ ಬೆಂಗಳೂರಿನ ಸಂಚಾರ ಸಮಸ್ಯೆ ಮುಕ್ತವಾಗಿರುವ ಗುರಿಯನ್ನು ನಗರದ ಸಂಚಾರ ವಿಭಾಗದ ಪೊಲೀಸರಿಗೆ ನೀಡಲಾಗಿರುವುದರಿಂದ, ಇನ್ನು ಮುಂದೆ ರಸ್ತೆಗಳಲ್ಲಿ ಡ್ರೋಣ್ ಕ್ಯಾಮೆರಾಗಳನ್ನು ಬಳಸಿ ಸಂಚಾರ ದಟ್ಟಣೆ ತಗ್ಗಿಸಲು ಪೊಲೀಸರು ಮುಂದಾಗಿದ್ದಾರೆ.
- ಪಾಲಕ್ಕಾಡ್‌ನ 90 ವರ್ಷಗಳ ಇತಿಹಾಸವಿರುವ ಕೇರಳದ ಕಲಾಮಂಡಲಂನಲ್ಲಿ 14 ವರ್ಷದ ಸಾಬ್ರಿ ಎನ್ ಚೆರುತುರುತಿ ಎನ್ನುವ ಮುಸ್ಲಿಂ ಬಾಲಕಿಗೆ ಪ್ರವೇಶ ನೀಡಲಾಗಿದ್ದು, ಮೊದಲ ಬಾರಿಗೆ ಕಥಕ್ಕಳಿ ಕಲಿಯಲಿರುವ ಮೊದಲ ಮುಸ್ಲಿಂ ಎಂದು ದಾಖಲಾಗಿದ್ದಾಳೆ.
- ರಾಜ್ಯ ಸರ್ಕಾರ ಉಚಿತ ವಿದ್ಯುತ್ ಗ್ಯಾರಂಟಿ ಈಗ ನೀಡಿದೆ. ಆದರೆ, ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಶಿರೋಳ ಗ್ರಾಮದಲ್ಲಿ ಕಳೆದ 20 ವರ್ಷಗಳಿಂದಲೂ ಅಘೋಷಿತ ಉಚಿತ ವಿದ್ಯುತ್ ಯೋಜನೆ ಚಾಲ್ತಿಯಲ್ಲಿದೆ. ಕಾರಣ; ಅಂದಿನ ರೈತ ಹೋರಾಟದ ಫಲವಾಗಿ ಕೈಗೊಂಡ ನಿರ್ಣಯ ಇಂದಿಗೂ ಜಾರಿಯಲ್ಲಿದೆ.
- ಬೆಳಗಾವಿ ತಾಲೂಕಿನ ಜಾಫರವಾಡಿ ಗ್ರಾಮದ ನಿವಾಸಿಯಾಗಿರುವ 26 ವರ್ಷದ ನಿಕಿತಾ ವೈಜು ಪಾಟೀಲ್ ಬಡ ರೈತನ ಮಗಳಾದರೂ ಸಿಎ ಆಗಬೇಕೆಂಬ ದೊಡ್ಡ ಕನಸು ಕಂಡಿದ್ದಳು. ಆದರೆ, ತಂದೆಯ ನಿಧನದಿಂದಾಗಿ ವ್ಯಾಸಂಗ ಮೊಟಕುಗೊಳಿಸಿದ್ದ ಈಕೆ, ಕೃಷಿಯತ್ತ ಮುಖ ಮಾಡಿ, ಇಂದು ತಿಂಗಳಿಗೆ ಲಕ್ಷ ಲಕ್ಷ ಸಂಪಾದನೆ ಮಾಡುತ್ತಿದ್ದಾಳೆ.
- ಉತ್ತರ ಪ್ರದೇಶದಲ್ಲಿ ಬಿಸಿಲ ಝಳ ಮುಂದುವರೆದಿದ್ದು, ಕಳೆದ 24 ಗಂಟೆಗಳ ಅವಧಿಯಲ್ಲಿ ಬಿಸಿಲ ಝಳಕ್ಕೆ 34 ಮಂದಿ ಸಾವಿಗೀಡಾಗಿದ್ದಾರೆ ಅದರಲ್ಲಿ ಹೆಚ್ಚಿನವರು 60 ವರ್ಷಕ್ಕಿಂತ ಮೇಲ್ಪಟ್ಟವರು ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.
- ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ಶ್ರೀಹರಿಕೋಟಾದಿಂದ ತನ್ನ ಸುಧಾರಿತ ನ್ಯಾವಿಗೇಷನ್ ಉಪಗ್ರಹ GSLV-F12 ಮತ್ತು NVS-01ನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ.
- ಭಾರತದಲ್ಲಿ ಮಧುಮೇಹದ ಪ್ರಮಾಣವು ಶೇಕಡಾ 11.4 ರಷ್ಟಿದ್ದು, ಶೇಕಡಾ 35.5 ರಷ್ಟು ಜನರು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದಾರೆ ಎಂದು ದಿ ಲ್ಯಾನ್ಸೆಟ್ ವರದಿ ಬಿತ್ತರಿಸಿದೆ.

## ಓದುಗರ ಅನಿಸಿಕೆ...




**ಭದ್ರ ಲಾಕರ್‌ಗಳಲ್ಲಿ ಇರಿಸಿಕೊಳ್ಳುವುದು ಸೂಕ್ತ :** ಗೃಹ ನಿರ್ಮಾಣಕ್ಕೆ ಸಾಲ ಪಡೆಯುವ ವೇಳೆ ಗ್ರಾಹಕರು ನೀಡಿದ ಆಸ್ತಿಯ ದಾಖಲೆಗಳನ್ನು ಹಣಕಾಸು ಬ್ಯಾಂಕ್ ಕಳೆದು ಹಾಕಿದರೆ, ಆಯಾ ಸಂಸ್ಥೆಗಳೇ ಹೊಣೆ ಹೊರಬೇಕು ಎಂದು ಕಳೆದ ವರ್ಷ ಮೇನಲ್ಲಿ ರಚಿಸಿದ್ದ ಬಿ.ಪಿ.ಕಾನೂನಗೋ ನೇತೃತ್ವದ ಆರು ಸದಸ್ಯರ ಸಮಿತಿ ಶಿಫಾರಸ್ಸು ಮಾಡಿರುವುದು ಸರಿಯಾಗಿದೆ. ಮುಂದಿನ ದಿನಗಳಾದರೂ ಗ್ರಾಹಕರ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಭದ್ರ ಲಾಕರ್‌ಗಳಲ್ಲಿ ಇರಿಸಿಕೊಳ್ಳುವುದು ಸೂಕ್ತ.

**▸▸ ಎಂ.ಆರ್. ಕಟ್ಟೀಮನಿ, ಯಾದಗಿರ್**

**ನೆಮ್ಮದಿಯ ನಿಟ್ಟುಸಿರು :** ಪ್ರಸಕ್ತ ಸಾಲಿನ ಎರಡನೇ ತ್ರೈಮಾಸಿಕದಲ್ಲೂ ರೆಪೊ ದರವನ್ನು ಆರ್‌ಬಿಐ ಯಥಾಸ್ಥಿತಿಯಲ್ಲಿ ಇರಿಸಿರುವ ಕಾರಣ, ಮುಂದಿನ ದಿನಗಳಲ್ಲಿ ಬ್ಯಾಂಕಿನಿಂದ ಸಾಲ ಪಡೆದವರಿಗೆ ಅವರ ಸಾಲದ ಮೇಲಿನ ಬಡ್ಡಿ ದರ ಇಳಿಕೆಯ ಸಾಧ್ಯತೆ ಇದೆ. ನಿರಂತರ ಬಡ್ಡಿ ದರ ಏರಿಕೆಯಿಂದ ಕಂಗಾಲಾಗಿದ್ದ ಗೃಹ ಸಾಲ ಪಡೆದವರು ನೆಮ್ಮದಿಯ ನಿಟ್ಟುಸಿರು ಬಿಡಬಹುದಾಗಿದೆ.

**▸▸ ಜಿ. ಪಂಡಿತಾರಾಧ್ಯ, ದಾವಣಗೆರೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.